ವಿಷಯ:- ಸುಳ್ಯ ವಿಧಾನ ಸಭಾ ಕ್ಷೇತ್ರದ ಲೋಕೋಪಯೋಗಿ ಇಲಾಖೆ ಯವರಿಂದ ಡಾಂಬರೀಕರಣಕ್ಕೆ ಟೆಂಡರ್.

96(385)

ಶ್ರೀ ಎಸ್. ಅಂಗಾರ (ಸೂಳ್ಯ):- ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ 1992 ರಿಂದ 96ರ ವರೆಗೆ ಮರು ಡಾಂಬರೀಕರಣ ಮಾಡಲು ಎಷ್ಟು ಟೆಂಡರ್‌ಗಳನ್ನು ಕರೆಯಲಾಗಿದೆ, ಟೆಂಡರ್‌ಗಳನ್ನು ಯಾರು ಯಾರಿಗೆ ಎಷ್ಟು ಹಣಕ್ಕೆ ನೀಡಲಾಗಿದೆ, (ವಿವರ ನೀಡುವುದು);

ಆ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು ಎಷ್ಟು ಕಿಮೀ. ವ್ಯಾಪ್ತಿಯಲ್ಲಿ ಮರು ಡಾಂಬರೀಕರಣ ಮಾಡಲಾಗಿದೆ? (ವಿವರ ನೀಡುವುದು).

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 1992 ರಿಂದ 96 ರವರೆಗೆ ರಸ್ತೆಗಳಿಗೆ ಮರು ಡಾಂಬರೀಕರಣ ಮಾಡಲು ಒಟ್ಟು 28 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

	ಟೆಂಡರ್ ವಿವರ	ಸಂಖ್ಯೆ	ಮೊತ್ತ
1.	ಎಂ. ಮಹಮದ್ ಪೂತ್ತೂರು	18	1527545.00
2.	ಶ್ರೀ ವಿಶ್ವೇಶ್ವರ ಸೆಟ್ಟೂರು ಸುಳ್ಯ	6	505850.00
3.	ನವೀನ್ ಡಿ.ಎಸ್. ಕನಕ ಮಜಲು	1	108650.00
4.	ಸಿ.ಹೆಚ್. ಅಬ್ದುಲ್ ಕುಂಞ	1	256830.00
		26	

ಆ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 12.43 ಕಿಮೀ ವ್ಯಾಪ್ತಿಯಲ್ಲಿ ಮರು ಡಾಂಬರೀಕರಣ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ-1

ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ 1992 ರಿಂದ 1996 ರವರೆಗೆ ಮಾಡಲಾದ ರಸ್ತೆ ನವೀಕರಣ ಕಾಮಗಾರಿಗಳ ವಿವರ 1992-93ನೇ ಸಾಲಿನಲ್ಲಿ.

1.	ಮೈಸೂರು ಬಂಟ್ವಾಳ ರಸ್ತೆ ಕಿಮೀ 157.20 ರಿಂದ 150.00 ಕಿಮೀ. ವರೆಗೆ ಮರು ಡಾಂಬರೀಕರಣ.	0.80 ಕಿಮೀ.
2.	1993-94ನೇ ಸಾಲಿನಲ್ಲಿ	
1.	ಮೈಸೂರು ಬಂಟ್ವಾಳ ಕಿಮೀ. 171.00 ರಿಂದ 171.80 ರವರೆಗೆ ಮರು ಡಾಂಬರೀಕರಣ.	0.80 ಕಿಮೀ.
2.	-''- ರಸ್ತೆಯ ಕಿಮೀ. 151.60 ರಿಂದ 152.00 ರವರೆಗೆ ಮರು ಡಾಂಬರೀಕರಣ.	0.40 ಕಿಮೀ.
3.	-''- ರಸ್ತೆಯ 151.20 ರಿಂದ 151.60 ರವರೆಗೆ ಮರು ಡಾಂಬರೀಕರಣ.	0.38 ಕಿಮೀ.
4.	-''- ರಸ್ತೆಯ ಕಿಮೀ. 173.60 ರಿಂದ 174.00 ಕಿಮೀ. ವರೆಗೆ	0.40 ಕಿಮೀ.
5.	-''- ರಸ್ತೆಯ ಕಿಮೀ. 148.80 ರಿಂದ 149.00 ಕಿಮೀ. ವರೆಗೆ	0.20 ಕಿಮೀ.
6.	-''- ರಸ್ತೆಯ ಕಿಮೀ. 149.00 ರಿಂದ 150.00 ಕಿಮೀ. ರವರೆಗೆ	1.00 ಕಿಮೀ. 3.18 ಕಿಮೀ.
	1994-95ನೇ ಸಾಲಿನಲ್ಲಿ	
1.	ಸುಳ್ಯ ತಾ: ನ ಕಾಸರಗೊಡು ಜಾಲ್ಸೂರು ರಸ್ತೆಯ ಕಿಮೀ. 49.70 ರಿಂದ 50.20 ರವರೆಗೆ ಮರು ಡಾಂಬರೀಕರಣ.	0.50 ಕಿಮೀ.
2.	ಸುಳ್ಯ ತಾ: ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯ ಕಿಮೀ. 0.0 ರಿಂದ 0.40 ಕಿಮೀ.ವರೆಗೆ ಮರು ಡಾಂಬರೀಕರಣ.	0.40 ಕಿಮೀ.
3.	ಸುಳ್ಯ ತಾ: ನ ಬೆಳ್ಳಾರೆ ಬೆಂಗಮಲ್ ವೈಚಾರ ರಸ್ತೆಯ ಕಿಮೀ. 5.0 ರಿಂದ 5.30 ಕಿಮೀ. ಮರು ಡಾಂಬರೀಕರಣ.	0.30 ಕಿಮೀ.

4.	ಸುಳ್ಯ ತಾ: ನ ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯ ಕಿಮೀ. 39.85 ರಿಂದ 40.00 ಕಿಮೀ.ವರೆಗೆ.	0.15 ಕಿಮೀ.
5.	ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆಯ ಕಿಮೀ. 4.40 ರಿಂದ 5.00 ಕಿಮೀ.ವರೆಗೆ ಮರು ಡಾಂಬರೀಕರಣ.	0.60 ಕಿಮೀ. 1.95 ಕಿಮೀ.
	1995-96ನೇ ಸಾಲಿನಲ್ಲಿ	
1.	ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆಯ ಕಿಮೀ. 0.50 ರಲ್ಲಿ 2.00 ಕಿಮೀ. ಮರು ಡಾಂಬರೀಕರಣ.	1.50 ಕಿಮೀ.
2.	ಸುಳ್ಯ ತಾ: ನ ಎಲೆಮಲೆ ಅರಂತೋಡು ರಸ್ತೆಯ ಕಿಮೀ. 8.00 ರಿಂದ 13.25 ಕಿಮೀ. ವರೆಗೆ ಡಾಂಬರು ರಸ್ತೆಗೆ ನೀಲ್ ಕೋಟೆ ಒದಗಿಸುವುದು.	5.00 ಕಿಮೀ.
		6.50 ಕಿಮೀ.
	ಒಟ್ಟು ಕಿ.ಮೀ.	12.43 ಕಿಮೀ.

ವಿಷಯ:- ರಾಜ್ಯದ ರಸ್ತೆಗಳ ದುರಸ್ತಿ

101(32)

ಶ್ರೀ ಹೆಚ್.ಡಿ. ಬಸವರಾಜ (ವಿರಾಜಪೇಟೆ):- ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ರಸ್ತೆ ದುರಸ್ತಿ, ನವೀಕರಣ ಹಾಗೂ ರಸ್ತೆ ಅಗಲಗೊಳಿಸುವಿಕೆಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

2) 1996-97ನೇ ಸಾಲಿನಲ್ಲಿ (1996 ಡಿಸೆಂಬರ್ 31ರ ವರೆವಿಗೆ) ಎಷ್ಟು ಹಣವನ್ನು ರಸ್ತೆ ದುರಸ್ತಿಗೆ, ರಸ್ತೆ ನವೀಕರಣ ರಸ್ತೆ ಅಗಲಗೊಳಿಸುವಿಕೆ ಮತ್ತು ಹೊಸ ರಸ್ತೆ ನಿರ್ಮಾಣ ಇವುಗಳ ಬಾಬ್ತಿನಲ್ಲಿ ವೆಚ್ಚ ಮಾಡಲಾಗಿದೆ? (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

1) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ರಸ್ತೆ ದುರಸ್ತಿ, ರಸ್ತೆ ನವೀಕರಣ ಹಾಗೂ ರಸ್ತೆ ಅಗಲಗೊಳಿಸುವಿಕೆ ಕಾಮಗಾರಿಗಳಿಗೆ ಒಟ್ಟು ವೆಚ್ಚವು ರೂ. 6886.79 ಲಕ್ಷ ಮಾಡಲಾಗಿದೆ. ಈ ಬಗ್ಗೆ ಜಿಲ್ಲಾ ವಿವರಗಳ ಪಟ್ಟಿ ನಮೂನೆ 1 ರಲ್ಲಿ ನೀಡಲಾಗಿದೆ.